# ಭಾರತೀಯ ಹಜ್ ಸಮಿತಿ

(ಭಾರತೀಯ ಅಲ್ಪಸಂಖ್ಯಾತ ವ್ಯವಹಾರ ಮಂತ್ರಾಲಯದ ಶಾಸನಾತ್ಮಕ ವಿಭಾಗ).
ಬೈತ್-ಉಲ್-ಹುಜ್ಜಾಜ್ (ಹಜ್ ಹೌಸ್), 7-ಎ, ಎಮ್.ಆರ್.ಎ. ಮಾರ್ಗ,
(ಪಲ್ಟನ್ ರಸ್ತೆ), ಮುಂಬಯಿ – 400 001

**ಹಜ್ 1438 (ಹೆಚ್) – 2017 (ಸಿಈ)ಗಾಗಿ ಪ್ರಕಟಣೆ.**

ಭಾರತೀಯ ಹಜ್ ಸಮಿತಿಯವರಿಂದ 2017ನೇ ಸಾಲಿನ ಹಜ್‌ಗಾಗಿ ಅರ್ಜಿಗಳ ಸಂಸ್ಕರಣೆಯ ಕಾರ್ಯ 02ನೇ ಜನವರಿ 2017ರಂದು ಆರಂಭಗೊಳ್ಳಲಿದೆ. ಹಜ್‌ನ ಅರ್ಜಿ ಫಾರ್ಮ್‌ಗಳು (ಹೆಚ್ ಎ ಎಫ್) ಮತ್ತು ಮಾರ್ಗಸೂಚಿಗಳನ್ನೊಳಗೊಂಡ ಪುಸ್ತಿಕೆ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳ ಹಜ್ ಸಮಿತಿಗಳ ಕಚೇರಿಗಳಿಂದ (ಎಸ್.ಹೆಚ್.ಸಿ) ಅಥವಾ ಭಾರತೀಯ ಹಜ್ ಸಮಿತಿಯ ವೆಬ್‌ಸೈಟ್: hajcommittee.gov.in ನಿಂದ ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ. ಅರ್ಜಿದಾರರು ಇದನ್ನು ಭರ್ತಿಮಾಡಿ ತಮ್ಮ ಹೆಚ್‌ಎಎಫ್‌ನ್ನು ಸಲ್ಲಿಸುವ ಮೊದಲು ಮಾರ್ಗಸೂಚಿಗಳನ್ನು ಜರೂರಾಗಿ ಓದಿಕೊಳ್ಳಬೇಕು. ತುಂಬಿಸಿದ ಅರ್ಜಿಗಳನ್ನು ಆಯಾ ರಾಜ್ಯ ಹಜ್ ಸಮಿತಿಗಳ ಕಚೇರಿಗಳಲ್ಲಿ ದಿನಾಂಕ 02ನೇ ಜನವರಿ, 2017 ರಿಂದ 24ನೇ ಜನವರಿ, 2017ರವರೆಗೆ ಕೆಲಸದ ವೇಳೆಯಲ್ಲಿ ಸ್ವೀಕರಿಸಲಾಗುವುದು. ಅರ್ಜಿದಾರರು ದಿನಾಂಕ 24-01-2017ರವರೆಗೆ ಹಾಗೂ ಇದರ ಮೊದಲು ನೀಡಲಾಗಿರುವ ಮತ್ತು ದಿನಾಂಕ 28-02-2018ರವರೆಗೆ ಮಾನ್ಯವಾದ, ಮಶೀನ್‌ನಿಂದ ಓದಬಲ್ಲ ಅಂತರಾಷ್ಟ್ರೀಯ ರಹದಾರಿ ಪತ್ರವನ್ನು (ಪಾಸ್‌ಪೋರ್ಟ್) ಹೊಂದಿರುವುದು ಅತ್ಯವಶ್ಯಕವಾಗಿರುತ್ತದೆ.

ಹಜ್‌ಗಾಗಿ ಅರ್ಜಿಗಳನ್ನು (ಹೆಚ್.ಎ.ಎಫ್) ಆನ್‌ಲೈನ್ ಮೂಲಕ ಇಲ್ಲಿ ಕೂಡ ಸಲ್ಲಿಸಬಹುದಾಗಿದೆ.

**hajcommittee.gov.in**

ಹಜ್ ಯಾತ್ರೆ ಕೈಗೊಳ್ಳುವ ಇಚ್ಛೆಯುಳ್ಳವರು, ಆದಷ್ಟು ಜರೂರಾಗಿ ಅರ್ಜಿ ಸಲ್ಲಿಸುವುದು.